


# ಎಪಿಗ್ರಾಫಿಯ ಕರ್ನಾಟಿಕ

## ೧೨ನೆಯ ಸಂಪುಟ

**ಎಚ್ ಎಂ ನಾಗರಾಜರಾವ್***

* ಸಂಪಾದಕರು *ಎಪಿಗ್ರಾಫಿಯಾ ಕರ್ನಾಟಿಕ* ಪರಿಷ್ಕೃತ ಆವೃತ್ತಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ ಮೈಸೂರು ೫೭೦ ೦೦೬

ಕನ್ನಡ ನಾಡಿನ ಇತಿಹಾಸದ ಪುನಾರಚನೆಗೆ ಇರುವ ಆಕರಗಳಲ್ಲಿ ಶಾಸನಗಳಿಗೆ ಪ್ರಮುಖ ಸ್ಥಾನ ಸಲ್ಲುತ್ತದೆ. ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕಗಳಲ್ಲಿ ಬೆಂಜಮಿನ್ ಲೂಯಿ ರೈಸ್ (೧೮೩೭–೧೯೨೭) ಅವರು ಆಗಿನ ಹಳೆಯ ಮೈಸೂರು ಮತ್ತು ಕೊಡಗು ರಾಜ್ಯಗಳಲ್ಲಿ ಸಂಚರಿಸಿ, ಶಾಸನಗಳನ್ನು ಸಂಗ್ರಹಿಸಿ, ಸಂಪಾದಿಸಿ ಒಟ್ಟು ೮೮೬೯ ಶಾಸನಗಳನ್ನು ಹನ್ನೆರಡು ಸಂಪುಟಗಳಲ್ಲಿ ಪ್ರಕಟಿಸಿದರು. ಈ ಸಂಪುಟಗಳಿಗೆ ಅವರು ಕೊಟ್ಟ ಶೀರ್ಷಿಕೆ *ಎಪಿಗ್ರಾಫಿಯಾ ಕರ್ಣಾಟಿಕಾ.* ಈ ಸಂಪುಟಗಳು ದುರ್ಲಭವಾದ್ದರಿಂದ ಕರ್ನಾಟಕ ಸರ್ಕಾರವು ಈ ಸಂಪುಟಗಳನ್ನು ಪರಿಷ್ಕರಿಸಿ, ಪುನರ್ಮುದ್ರಿಸುವ ಕಾರ್ಯವನ್ನು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ವಹಿಸಿತು. ಮೈಸೂರು ಪುರಾತತ್ತ್ವ ಇಲಾಖೆಯ ವಾರ್ಷಿಕ ವರದಿಗಳಲ್ಲಿ ಪ್ರಕಟವಾದ ಹಾಗೂ ಹೊಸದಾಗಿ ಅನ್ವೇಷಿತವಾದ ಶಾಸನಗಳನ್ನು ಕೂಡ ಪರಿಷ್ಕೃತ ಸಂಪುಟಗಳಲ್ಲಿ ಸೇರಿಸಲಾಗಿದೆ.



ಈ ಮಾಲಿಕೆಯಲ್ಲಿ ಇದುವರೆಗೆ ಒಟ್ಟು ಹನ್ನೊಂದು ಸಂಪುಟಗಳು ಪ್ರಕಟವಗಿವೆ. ೧೯೦೧ ರಲ್ಲಿ ರೈಸ್ ಅವರು ೬ನೆಯ ಸಂಪುಟವಾಗಿ ಪ್ರಕಟಿಸಿದ *ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಶಾಸನಗಳು* ಈಗ ೧೧ ಮತ್ತು ೧೨ ನೆಯ ಸಂಪುಟಗಳಾಗಿವೆ. ೧೯೯೮ ರಲ್ಲಿ ಪ್ರಕಟವಾದ ೧೧ ನೆಯ ಸಂಪುಟದಲ್ಲಿ ಚಿಕ್ಕಮಗಳೂರು (೨೨೦). ಮೂಡಗೆರೆ (೧೧೪) ಮತ್ತು ಶೃಂಗೇರಿ (೮೦) ಶಾಸನಗಳು ಸೇರಿದ್ದವು. ಈಗ ಪ್ರಕಟವಾಗುತ್ತಿರುವ ೧೨ ನೆಯ ಸಂಪುಟದಲ್ಲಿ ಕಡೂರು (೨೬೪), ಕೊಪ್ಪ (೪೮), ತರೀಕೆರೆ (೧೦೩) ಹಾಗೂ ನರಸಿಂಹರಾಜಪುರ (೪೪) ಶಾಸನಗಳಿವೆ. ಅನುಬಂಧದಲ್ಲಿ ೮ ಶಾಸನಗಳಿವೆ. ರೈಸ್ ಅವರ ಸಂಪುಟದಲ್ಲಿ ಒಟ್ಟು ೬೧೫ ಶಾಸನಗಳಿದ್ದರೆ ಪರಿಷ್ಕೃತ ಸಂಪುಟಗಳಲ್ಲಿ ೮೮೧ ಶಾಸನಗಳಿವೆ. ಇನ್ನೂ ಹೊಸ ಹೊಸ ಶಾಸನಗಳು ಅನ್ವೇಷಿತವಾಗುತ್ತಿವೆ.

## ರಾಜವಂಶಗಳು

ಕನ್ನಡನಾಡನ್ನು ಆಳಿದ ಹಿರಿಯ ಹಾಗೂ ಕಿರಿಯ ರಾಜವಂಶಗಳಿಗೆ ಸಂಬಂಧಿಸಿದ ಶಾಸನಗಳು ಈ ಸಂಪುಟದಲ್ಲಿವೆ. ಬೀರೂರಿನಲ್ಲಿ ದೊರೆತ ತಾಮ್ರಶಾಸನವೊಂದರಲ್ಲಿ ಕದಂಬ ದೊರೆ ಶಾಂತಿವರ್ಮನನ್ನು "ವೈಜಯನ್ತೀತಿಲಕ ಸಮಗ್ರಕರ್ನಾಟಭೂವರ್ಗ್ಗಭರ್ತ್ತಾರ" ಎಂದು ಬಣ್ಣಿಸಿದೆ. ತರೀಕೆರೆ ತಾಲ್ಲೂಕಿನ ಮುದಿಗೆರೆ ಗ್ರಾಮದಲ್ಲಿ ಈಚೆಗೆ ಹೊಲವೊಂದರಲ್ಲಿ ಉಳುಮೆ ಮಾಡುತ್ತಿದ್ದಾಗ ಸಿಕ್ಕ ಎರಡು ತಾಮ್ರಶಾಸನಗಳು ವಿಷ್ಣುವರ್ಮ ಎಂಬ ರಾಜನಿಗೆ ಸೇರಿದವು. ತಲಕಾಡಿನಿಂದ ಆಳುತ್ತಿದ್ದ ಗಂಗರಸರ ಆಳ್ವಿಕೆಗೆ ಸೇರಿದ ಹಲವು ಶಾಸನಗಳು ಈ ಸಂಪುಟದಲ್ಲಿವೆ. ಮೊದಲ ಬಾರಿಗೆ ಅರಸಾಣೆಮಹಾರಾಜ ಎಂಬ ದೊರೆಯ ಉಲ್ಲೇಖ ದೊರೆಯುತ್ತದೆ. ಗಂಗ ದೊರೆ ಅವಿನೀತ " ವಿನೀತರಲ್ಲದ ಶತ್ರುರಾಜ ಮಂಡಲಿಗೆ ಅವಿನೀತನಾದವ"ನಾದರೆ, ಅವನ ಮಗ ದುರ್ವಿನೀತ "ದುಷ್ಟ ಕಲಿಗೆ ಮಾತ್ರ ಬಾಗದವ"ನಂತೆ. ಅವರಿಬ್ಬರ ಹೆಸರುಗಳನ್ನು ಹೀಗೆ ವಿವರಿಸಲಾಗಿದೆ. ಶಿವಮಾರನ ಮಗ "ಜ್ಯೋತಿಜ್ಞಾನಪ್ರವೀಣ" ಎಂದು ಖ್ಯಾತನಾಗಿದ್ದ.

ಪಸಿಂಡಿ ಗಂಗವಂಶ ಶಾಖೆಯ ಪ್ರಸ್ತಾಪವಿರುವ ತಾಮ್ರ ಶಾಸನವು ನರಸಿಂಹರಾಜಪುರದ ಜೈನ ಮಠದಲ್ಲಿದೆ. ಇನ್ನೊಂದು ಶಾಖೆ ಕಡೂರು ತಾಲ್ಲೂಕಿನ ಆಸಂದಿಯಿಂದ ಹೊಯ್ಸಳರ ಸಾಮಂತರಾಗಿ ಆಡಳಿತ ನಡೆಸುತ್ತಿತ್ತು. ಈ ಶಾಖೆಯ ವೈಜರಸನೆಂಬಾತನನ್ನು ಕುರಿತ ಸ್ವಾರಸ್ಯಕರ ಮಾಹಿತಿ ದೊರೆಯುತ್ತದೆ: ಬೇಡರಬಂಕಿ ಎಂಬ ಹೆಸರಿನ ಕಾಡಿನಲ್ಲಿ ಅಗ್ಗದರಾಯನು ಓಡುತ್ತಿದ್ದಾಗ ವೈಜರಸ ಬಿಟ್ಟ ಬಾಣವೆಂದು ಆತನ ತಲೆಯನ್ನು

ಉರುಳಿಸಿದರೂ ಅಷ್ಟಕ್ಕೆ ನಿಲ್ಲದೆ ಮುಂದೆ ಸಾಗಿ ಆಕಾಶದಲ್ಲಿ ಹಾರುತ್ತಿದ್ದ ಒಂದು ಹದ್ದಿನ ಕಣ್ಣಿಗೆ ಹೊಡೆಯಿತಂತೆ! ಎಲ್ಲ ಆತನ ಪರಾಕ್ರಮಕ್ಕೆ ಬೆರಗಾದರಂತೆ. ಅಧಿರಾಜನು ಆತನಿಗೆ ಕಣ್ಣಂಬು ಎಂಬ ಬಿರುದನ್ನು ನೀಡಿದನಂತೆ. ವಿಜಯನಗರದ ಅರಸರು, ಕಳಸ-ಕಾರ್ಕಳದ ಪ್ರಭುಗಳು, ಕೆಳದಿಯ ನಾಯಕರು, ಮೈಸೂರು ಒಡೆಯರು, ಸಂತೆಬೆನ್ನೂರು, ಬೇಲೂರು ಹಾಗೂ ದಾನಿವಾಸದ ಪಾಳೆಯಗಾರರಿಗೆ ಸಂಬಂಧಪಟ್ಟ ಶಾಸನಗಳು ಈ ಸಂಪುಟದಲ್ಲಿವೆ. ಸಾಂತರ ಮತ್ತು ಕಲ್ಯಾಣದ ಚಾಲುಕ್ಯರ ಕೆಲವು ಶಾಸನಗಳು ಗಮನಾರ್ಹವಾಗಿವೆ.

**ಹೊಯ್ಸಳ**

ಹೊಯ್ಸಳರು ಈ ಜಿಲ್ಲೆಯ ಮಣ್ಣಿನ ಮಕ್ಕಳು. ಅವರಿಗೆ ಸೇರಿದ ಶಾಸನಗಳೇ ಹೆಚ್ಚು ಸಂಖ್ಯೆಯಲ್ಲಿ ದೊರೆತಿರುವುದು ಸ್ವಾಭಾವಿಕ. ಸಳ ಹುಲಿಯನ್ನು ಕೊಂದು ಹೊಯ್ಸಳನಾದ ಕಥೆ ಹಲವು ಶಾಸನಗಳಲ್ಲಿ ನಿರೂಪಿತವಾಗಿದೆ. ಈ ಕಾಲದಲ್ಲಿ ಇದ್ದ ಧಾರ್ಮಿಕ ಸ್ವರೂಪದ ಸಾಮಾಜಿಕ ಮೌಲ್ಯವೆಂದರೆ ಕೆರೆ-ಸತ್ರ ಕಟ್ಟಿಸುವುದು, ದೇವಾಲಯ ನಿರ್ಮಿಸುವುದು, ತೋಪು ನೆಡಿಸುವುದು, ಅರವಂಟಿಗೆ ಸ್ಥಾಪಿಸುವುದು ಹಾಗೂ ಅನ್ನದಾನ ಮಾಡುವುದು. ಕಡೂರು-೧೯೮ರ ಪ್ರಕಾರ "ಕೆಱೆಯಂ ದೇವಾಲ್ಯಂಗಳನಱವಟ್ಟಿಗೆಯಂನದಾನ ಪರಹಿತಮೆಂಬ ಅಱಿಕೆಯಫಲ"ವಂತೆ. ಇನ್ನೊಂದು ಶಾಸನ "ಒಲ್ದು ಕಟ್ಟಿಸಿದ ಕೆಱೆಯಿಕ್ಕುವ ಸತ್ರವೊರ್ಮ್ಮೆಯಿಂ ಪಾಳಿಸುವಗ್ರಹಾರ ಚಯಲಿಟ್ಟ ಅಱವಟ್ಟಿಗೆ" ಧರ್ಮಕಾರ್ಯವೆನ್ನುತ್ತದೆ. ವಿಷ್ಣುವರ್ಧನನ ಕಾಲದಲ್ಲಿ ಕಟ್ಟಲಾದ ಕೆರೆಯ ಹೆಸರು ವಿಷ್ಣುಸಮುದ್ರ; ಹೆಸರು ಸಮುದ್ರವಾದರೂ ಅದರ ನೀರು ಉಪ್ಪಲ್ಲ; ಅದು ರಾಕ್ಷಸರಿಗೆ ಆಶ್ರಯ ನೀಡಲಿಲ್ಲವಂತೆ. ಅದರ ಬಣ್ಣನೆ ಇದು:

*ಕುಡಿದು ಘಟೋದ್ಭವಂ ತವಿಸದಾ ರಘುವಂಶನ ತೀಬ್ರ ಬಾಣದಿಂ*
*ದುಡುಗದ ದೇವದಾನವಬಲಂ ಕಡೆಯಲು ಕಡದೆರ್ದ್ದ ಭಂಗವಂ* ।
*ಪಡೆಯದ ಪೇಯವಾರಿಪರಿಪೂರಿತವಪ್ಪನನಂತಸೆಯ್ಯೆಯೊಳು*
*ಪೊಡೆಯಲರಾತಿನಿಪ್ಪಮರವಾರಿಧಿಯಂಬುದು ವಿಷ್ಣುವಾರಿಧಿ* ।।

ಇಂಥ ಸುಂದರ ಪದ್ಯಗಳು ಈ ಸಂಪುಟದಲ್ಲಿ ಹಲವಿವೆ. ಇಮ್ಮಡಿ ಬಲ್ಲಾಳನ ಅರಸಿ ಮಧುಕಲದೇವಿಯು ಜಂಗಮಸರಸ್ವತಿ ಮತ್ತು ಸಂಗೀತಚೂಡಾಮಣಿ ಎನಿಸಿದ್ದಳು. ಇವುಗಳಲ್ಲಿ ಮೊದಲನೆಯ ಬಿರುದು ನಡೆದಾಡುವ ವಿಶ್ವಕೋಶ ಎಂಬ ಪದಪುಂಜಕ್ಕಿಂತಲೂ ತುಂಬ ಅರ್ಥವತ್ತಾದ ಅಭಿವ್ಯಕ್ತಿ ಎನಿಸುತ್ತದೆ. ಅಮಿತದಂಡನಾಥ ಎಂಬ ಅಧಿಕಾರಿ "ವೀರಬಲ್ಲಾಳರಾಜ್ಯಾಭ್ಯುದಯಕಾರಣಕಾರಣ" ಎನಿಸಿದ್ದನಂತೆ. ಕನ್ನಡಲಿಪಿ ಮತ್ತು ಬಹುಮಟ್ಟಿಗೆ ಮರಾಠಿ ಭಾಷೆಯಲ್ಲಿರುವ ವೀರಗಲ್ಲು ಶಾಸನವೊಂದು ಈಚೆಗೆ ಆಸಂದಿ ಗ್ರಾಮದಲ್ಲಿ ದೊರೆತಿದೆ. ೧೧೭೩ರ ಜುಲೈ ೨೨ ಭಾನುವಾರದಂದು ಬಲ್ಲಾಳ ಪಟ್ಟಾಭಿಷಿಕ್ತನಾದ ಸಂದರ್ಭದಲ್ಲಿ ದೂರದ ಸೌರಾಷ್ಟ್ರದ ಸೋಮನಾಥದೇವರಿಗೆ ಕುಪ್ಪೆಹಾಳು ಗ್ರಾಮವನ್ನು ದಾನ ನೀಡಿದುದು ಭಾರತದ ಸಾಂಸ್ಕೃತಿಕ ಏಕತೆಯನ್ನು ಬಿಂಬಿಸುತ್ತದೆ.

**ಸ್ಮಾರಕಶಾಸನಗಳು**


ಈ ಸಂಪುಟದಲ್ಲಿ ಸುಮಾರು ಅರವತ್ತು ಸ್ಮಾರಕ ಶಾಸನಗಳಿವೆ. ಎಂದರೆ ಕದನಗಳಲ್ಲಿ, ಸಂಘರ್ಷ ಗಳಲ್ಲಿ,ಕಳ್ಳರೊಡನೆ ಅಥವಾ ದುಷ್ಟ ಪ್ರಾಣಿಗಳೊಡನೆ ಹೋರಾಡಿ ಮಡಿದ ವೀರರಿಗೆ, ಹಾಗೆಯೇ ಪತಿಯೊಡನೆ ಸಹಗಮನ ಮಾಡಿದ ಸತಿಯರಿಗೆ ಇಲ್ಲವೆ ಜೈನ ವ್ರತವನ್ನು ಆಚರಿಸಿ ಮರಣ ಹೊಂದಿದ ವ್ಯಕ್ತಿಗಳಿಗೆ ನಿಲ್ಲಿಸಲಾದ ಶಾಸನಗಳನ್ನು ಕ್ರಮವಾಗಿ ವೀರಗಲ್ಲು, ಮಹಾಸತಿಗಲ್ಲು ಹಾಗೂ ನಿಶಿಧಿಗಲ್ಲುಗಳೆಂದು

ಕರೆಯಲಾಗಿದೆ. ಕ್ರಿ. ಶ. ೧೦೮೫ರಲ್ಲಿ ಮೂವರು ವೀರರು ಕಾದಿ ಮಡಿದಾಗ ಅವರಿಗೆ "ಯುದ್ಧಪರಿಹಾರ"ವಾಗಿ ಭೂ ಮತ್ತು ಧನದಾನ ಮಾಡಲಾಯಿತು. ಕ್ರಿ.ಶ. ೧೪೦೬ರಲ್ಲಿ ಗಂಗಪ "ಕಳ್ಳರ ಕೂಡೆ ಕಾದಿ ಕಳ್ಳರ ಕೊಂದು ತಾನು ಸಿವನೊಳಗಾದ" ವಿಷಯ ತರೀಕೆರೆ ತಾಲ್ಲೂಕಿನ ಶಾಸನವೊಂದರ ವಸ್ತು. ಅಂಬಳೆಯಲ್ಲಿ ಈಚೆಗೆ ಪತ್ತೆಯಾದ ಹೊಸ ಸತಿಶಾಸನ ಅಧ್ಯಯನಯೋಗ್ಯವಾದುದು. ಸಾಮಾನ್ಯವಾಗಿ ಸಹಗಮನವೆಂದರೆ ಅಗ್ನಿಪ್ರವೇಶ ಎಂದು ಸ್ವಾಭಾವಿಕವಾಗಿಯೇ ನಾವು ಭಾವಿಸುತ್ತೇವೆ. ಆದರೆ ಇದರಲ್ಲಿ ತಮ್ಮಿಸೆಟ್ಟಿ ಮರಣ ಹೊಂದಿದಾಗ ಆತನ ಹೆಂಡತಿ ಬೊಮ್ಮಿಯಕ್ಕ "ಗೋಪೆಯ ಹೊಕ್ಕ" ವಿಷಯ ನಿರೂಪಿತವಾಗಿದೆ. ಗೋಪೆ ಎಂಬ ಶಬ್ದಕ್ಕೆ ಇರುವ ಕೆಲವು ಅರ್ಥಗಳಲ್ಲಿ ಸಮಾಧಿ ಎಂಬುದೊಂದು.

ಸ್ಥಳನಾಮ ಅಧ್ಯಯನ ಈಚಿನ ದಿನಗಳಲ್ಲಿ ಗಮನ ಸೆಳೆಯುತ್ತಿರುವ ಕ್ಷೇತ್ರ. ಎಷ್ಟೋ ಊರಿನ ಹಿಂದಿನ ಹೆಸರುಗಳು ನಮಗೆ ಶಾಸನಗಳಿಂದ ಉಪಲಬ್ಧವಾಗುತ್ತವೆ. ಈಗಿನ ಬುಕ್ಕಾಂಬುಧಿಯ ಹಿಂದಿನ ಹೆಸರು ಅರಘಟ್ಟ. ಕಡೂರು ತಾಲ್ಲೂಕಿನ ಮಾದಾಪುರದ ಮೂಲ ಹೆಸರು ಕೇಶಿಯಹಳ್ಳಿ. ಕ್ರಿ.ಶ. ೧೨೧೮ರಲ್ಲಿ ಬಲ್ಲಾಳನ ರಾಣಿ ಬೈಚಲದೇವಿಯು ತನ್ನ ತಾಯಿ ಮಾದಿಯಕ್ಕನ ಹೆಸರಿನಲ್ಲಿ ಪ್ರಸನ್ನಮಾಧವ ದೇವಾಲಯವನ್ನು ಕಟ್ಟಿಸಿದಳು ಮತ್ತು ಆ ಊರಿಗೆ ಪ್ರಸನ್ನಮಾಧವಪುರ ಎಂಬ ಹೊಸ ನಾಮಕರಣ ಮಾಡಿದಳು. ಈಗ ಅದು ಪ್ರಸನ್ನ ಕಳೆದುಕೊಂಡು ಮಾದಾಪುರವಾಗಿದೆ! ಹಿಂದಿನ ನಾರಿ ಈಗಿನ ನಾರ್ವೆಯಾಗಿದೆ. ವ್ಯಕ್ತಿನಾಮಗಳಲ್ಲಿ ಕೆರೆಯಣ್ಣ,ಕಲ್ಲಬಂಡೆ ಮುಂತಾದವು ಕುತೂಹಲ ಕೆರಳಿಸುತ್ತವೆ.

**ಇತರ ಕೆಲವು ಅಂಶಗಳು**

ಕೊಪ್ಪ ತಾಲ್ಲೂಕಿನ ಹರಿಹರಪುರದ ಮಠವು ಶಿವಳ್ಳಿ ಸಂಸ್ಥಾನವೆನಿಸಿತ್ತು. ಶಿವಳ್ಳಿ ಎಂಬುದು ಮಲೆನಾಡಿನ ಸ್ಮಾರ್ತ ಪಂಗಡಗಳಲ್ಲಿ ಒಂದು. ಅಮೃತಾಪುರದ ಹೊಯ್ಸಳ ದೇವಾಲಯದ ಸುಂದರ ಗೋಡೆಶಿಲ್ಪಗಳನ್ನು ಕೆತ್ತಿದ ಕೆಲವು ಶಿಲ್ಪಿಗಳ ಹೆಸರುಗಳು ನಮೂದಾಗಿವೆ. ಕಾಳಗೌಣ್ಡನು ಧರ್ಮದ ಮೇರು, ಸತ್ಯದ ಕಣಿ, ಶೌಚದ ತವರ್ಮನೆ, ನೀತಿನಿಧಾನ ಮತ್ತು ಯಾಚಕಜನ ಕಲ್ಪವೃಕ್ಷ ಎನಸಿದ್ದನಂತೆ. ಚಂದವೆ ನಾಯಕಿತಿ ವೈಷ್ಣವಶಿಖಾಮಣಿ ಎಂದು ಮತ್ತು ಯೋಗೀಶ್ವರನು ವೈಷ್ಣವಾಗ್ರೇಸರ ಎಂದು ಪ್ರಖ್ಯಾತರಾಗಿದ್ದರು. ಶೃಂಗೇರಿ ಪೀಠಾಧಿಪತಿಗಳಾಗಿದ್ದ ವಿದ್ಯಾರಣ್ಯರಿಗೆ ಸಂಬಂಧಪಟ್ಟ ಕ್ರಿ.ಶ. ೧೩೭೭ರ ಹೊಸ ಶಾಸನವೊಂದು ಕುಂದ್ಕೆರೆಯಲ್ಲಿ ಪತ್ತೆಯಾಗಿದೆ.



ಕೆರೆಸಂತೆಯಲ್ಲಿ ಮಧ್ಯಕಾಲದ ೪೯ ಅಕ್ಷರಗಳಿಂದ ಕೂಡಿದ ಯಂತ್ರಶಿಲೆಗಳು ಲಭ್ಯವಾಗಿವೆ. ಅಮೃತಾಪುರದ ಶಾಸನ ಕನ್ನಡದ ಹೆಸರಾಂತ ಕವಿ ಜನ್ನನ ರಚನೆ. ಸ್ವೋಪಜ್ಞ ಪ್ರತಿಭೆಯ ಹಾಗೂ ಸುಂದರ ಅಭಿವ್ಯಕ್ತಿ ಸಾಮರ್ಥ್ಯದ ಹಲವು ಕವಿ–ಲೇಖಕರು ಇದರಲ್ಲಿ ಉಲ್ಲೇಖಿತ ರಾಗಿದ್ದಾರೆ. ಸೂರ್ಯಣ ಎಂಬಾತ ಒಬ್ಬ ಅಂದಲಿಪಿಗಾರ(ಕ್ಯಾಲಿಗ್ರಫಿಸ್ಟ್). ಒಟ್ಟಿನಲ್ಲಿ ಈ ಸಂಪುಟ ಸತ್ವದಲ್ಲಿ ಗಮನಯೋಗ್ಯವಾದುದು. ಒಂಬೈನೂರೆಂಬತ್ತು ಪುಟಗಳ ಈ ಬೃಹತ್ ಸಂಪುಟ ಸಂಸ್ಕೃತಿಪ್ರಿಯ ಜನರು ಪ್ರೀತಿಯಿಂದ ಕೈಗೆತ್ತಿಕೊಳ್ಳಬೇಕಾದುದು.



ಅದನ್ನು ೧೧ ನವೆಂಬರ್ ೨೦೦೩ರಂದು ಕನ್ನಡದ ಖ್ಯಾತ ಸಂಶೋಧಕ ಡಾ. ಎಂ. ಚಿದಾನಂದಮೂರ್ತಿ ಅವರು ಬಿಡುಗಡೆ ಮಾಡಿದಾಗ:

ಚಿತ್ರದಲ್ಲಿ: ಶಾಸನ ತಜ್ಞ ಶ್ರೀ ಕೆ ಮೊಹಮ್ಮದ್ ಷರೀಫ್, ಸಂಪಾದಕ ಎಚ್ ಎಂ ನಾಗರಾಜರಾವ್, ಪ್ರೊ ಎಂ ಚಿದಾನಂದಮೂರ್ತಿ, ಕುಲಪತಿ ಪ್ರೊ ಜೆ ಶಶಿಧರ ಪ್ರಸಾದ್, ಕುಲಸಚಿವ ಶ್ರೀ ಎನ್ ಡಿ ತಿವಾರಿ ಮತ್ತು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕ ಪ್ರೊ ಸಿ ಪಿ ಸಿದ್ಧಾಶ್ರಮ.

*೨೭೮, ನೆರಳು, ೫ ನೆಯ ಮುಖ್ಯ ರಸ್ತೆ ಎಚ್ ಬ್ಲಾಕ್, ರಾಮಕೃಷ್ಣನಗರ, ಮೈಸೂರು ೫೭೦ ೦೨೩

ಮುಖಪುಟ